● **ಕೊನೆ ಪ್ರಶ್ನೆ. ದೇವನೂರ ಮಹಾದೇವ ಅವರು ನಿಮ್ಮ ಕವಿತೆಗಳ ಬಗ್ಗೆ ‘ಸವಿತಾ ಕಾವ್ಯ ತಂಗಾಳಿಯಂತೆ’ ಅಂದಿದ್ದಾರೆ... ಇದನ್ನು ಮೊದಲಿಗೆ ಕೇಳಿದಾಗ ನಿಮಗಾದ ಅನುಭವವೇನು?**

ನನ್ನ ‘ಆಕಾಶಮಲ್ಲಿಗೆ’ ಸಂಕಲನವನ್ನು ನೆಲಮನೆ ದೇವೇಗೌಡರು ತಮ್ಮ ನೆಲಮನೆ ಪ್ರಕಾಶನದಿಂದ ಪ್ರಕಟಿಸಿದರು. ಅದಕ್ಕೆ ಜಿ.ಎಸ್.ಎಸ್ ಮತ್ತು ದೇವನೂರ ಅವರಿಗೆ ಬೆನ್ನುಡಿ ಬರೆಯಲು ಕೋರಿದ್ದೆ. ದೇವನೂರ ಅವರು ಕೊನೆ ಕ್ಷಣದಲ್ಲಿ ಪುಸ್ತಕ ಪ್ರಿಂಟ್‌ಗೆ ಹೋಗುವ ಹೊತ್ತಲ್ಲಿ ಫೋನ್ ಮಾಡಿ ‘ಸವಿತಾ ಕಾವ್ಯ ತಂಗಾಳಿಯಂತೆ’ ಎಂಬ ವಾಕ್ಯವನ್ನು ಹಾಕಿಕೊಳ್ಳಲು ತಿಳಿಸಿದರು. ನಾನು ಮನಸಲ್ಲಿ ಯೋಚಿಸಿದೆ ಈ ಮೂರು ಶಬ್ದಗಳು ಏನನ್ನು ಸೂಚಿಸುತ್ತಿವೆ. ತಂಗಾಳಿ ಸುಮ್ಮನೆ ಸೋಕಿ ಹೊರಟು ಹೋಗತ್ತಲ್ಲ; ಒಂದು ಕ್ಷಣದ ರೋಮಾಂಚನ ಅಷ್ಟೇ ಅಂತ ದೇವನೂರ ಅವರು ಹೇಳ್ತಿರಬಹುದಾ ಎಂದುಕೊಂಡೆ. ಇದನ್ನು ಓದಿದವರು ಥ್ರಿಲ್ ಆಗಿದ್ದರೆ ನಾನು ಹೀಗೆ ಯೋಚಿಸ್ತಿದ್ದೆ. ನನ್ನ ಆಲೋಚನೆ ಸರಿ ಅಂತ ದೃಢವಾದ್ದು ಈ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ. ದೇವನೂರ ಅಲ್ಲಿ ಬಹಳ ಕಟುವಾಗಿ ಮಾತಾಡಿದರು. ನನ್ನ ಕವಿತೆಗಳಲ್ಲಿ ಬರಿಯ ಪ್ರಕೃತಿ ಇದೆ ಮನುಷ್ಯರು ಬರಬೇಕು ಎಂದು ಆಕ್ಷೇಪವೆತ್ತಿದರು. ಕವಿತೆಗಳು ಇನ್ನೂ ಬಹಳ ಬೆಳೆಯಬೇಕು ಎಂದೂ ಹೇಳಿದರು. ನಾನು ಆ ಸಭೆಯಲ್ಲೆ ಅವರಿಗೆ ‘ಸಮಾಜವಾದಿಗಳ ಒಡನಾಟದಲ್ಲಿ ಏನನ್ನು ಪಡೆದಿದ್ದೇನೋ ಅದೇ ನನ್ನ ಕವಿತೆಗಳನ್ನು ರೂಪಿಸಿದೆ. ನನ್ನ ಕವಿತೆಗಳು ಸೋತಿದ್ದರೆ ಅದು ನನ್ನ ಸೋಲಲ್ಲ. ನಿಮ್ಮ ಸೋಲು’ ಎಂದು ಉತ್ತರ ಕೊಟ್ಟೆ. ಒಂದೆರಡು ದಿನದ ನಂತರ ದೇವನೂರ ಅವರು ಫೋನ್ ಮಾಡಿ ‘ಕವಿತೆಗಳನ್ನು ನಾನು ಸರಿ ಓದಿರಲಿಲ್ಲ. ಈಗ ಮತ್ತೊಮ್ಮೆ ಓದಿದ ನಂತರ ನನಗೆ ಬೇರೇನೆ ಅನಿಸ್ತಿದೆ’ ಎಂದು ಪಶ್ಚಾತ್ತಾಪ ಪಟ್ಟರು. ನಾನು ಹೇಳಿದೆ. ‘ನೀವು ಹಾಗೆ ಮಾತಾಡಿದ್ದೆ ಒಳ್ಳೆಯದಾಯಿತು. ಇದರಿಂದ ನನ್ನ ಪದ್ಯಗಳ ಬಗ್ಗೆ ನಾನು ಮತ್ತೊಮ್ಮೆ ಯೋಚಿಸುವಂತಾಯಿತು. ಮುಂದಿನ ದಿನಗಳಲ್ಲಿ ನನ್ನ ಪದ್ಯಗಳು ಬೇರೆ ರೀತಿಯಲ್ಲೆ ಇರುತ್ತವೆ’ ಎಂದೆ. ಆ ಕ್ಷಣವೆ ಮನಸಲ್ಲಿ ಸಂಕಲ್ಪ ಮಾಡಿದೆ. ನಾನು ಒಳ್ಳೆಯ ಕವಿತೆ ಬರೆಯಬೇಕು. ನನ್ನಲ್ಲಿ ಹಲವು ಮಿತಿಗಳಿವೆ ಅವನ್ನು ಮೀರಿಕೊಳ್ಳಬೇಕು. ಇದನ್ನು ಮನದಟ್ಟು ಮಾಡಿಸಲು ಇಂತ ಪಾಠ ಬೇಕಿತ್ತು. ನಂತರದಲ್ಲಿ ಬಂದಿದ್ದು ‘ಜಾತ್ರೆಯಲ್ಲಿ ಶಿವ’. ಅಲ್ಲಿಂದ ನಾನು ಬೇರೆ ರೀತಿಯೇ ಬರೆದೆ.



**ಅಕ್ಷತಾ ಹುಂಚದಕಟ್ಟೆ**

ಪ್ರಕಾಶನ, ಕವಿತೆ, ಹೋರಾಟಗಳಲ್ಲಿ ತಮ್ಮನ್ನು ಅನುದಿನವೂ ತೊಡಗಿಸಿಕೊಂಡಿರುವ ಅಕ್ಷತಾ, ತೀರ್ಥಹಳ್ಳಿ ತಾಲ್ಲೂಕಿನ ಹುಂಚದಕಟ್ಟೆಯವರು. ‘ರೆಕ್ಕೆ ಬಿಚ್ಚಿ ಆಕಾಶ ನೆಚ್ಚಿ’, ‘ನೀರ ಮೇಲಣ ಚಿತ್ರ’ ಅವರ ಪ್ರಕಟಿತ ಕವನ ಸಂಗ್ರಹಗಳಾಗಿವೆ. ರೈತ ಹೋರಾಟಗಾರ ಕಡಿದಾಳು ಶಾಮಣ್ಣ ಅವರ ಆತ್ಮಕಥನ ‘ಕಾಡತೊರೆಯ ಜಾಡು’ ಪುಸ್ತಕವನ್ನು ನಿರೂಪಿಸಿ ಸಂಗ್ರಹಿಸಿದ್ದಾರೆ. ಪ್ರಸ್ತುತ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ.